


**ಎಡದಿಂದ ಬಲಕ್ಕೆ:**

1. ಅಧ್ಯಕ್ಷರ ಪಕ್ಕದಲ್ಲೇ ನೋಡಿ ಅವರ ಶಿಕ್ಷಕ (4)
3. ಪರಿಭವದಿಂದ ಮುಕ್ತಗೊಳಿಸಿದ್ದು ಇದೇ ವರ್ಚಸ್ಸು (3)
4. ಕಸವನ್ನೆಲ್ಲ ಗುಡಿಸಿ ಹಾಕಲು ಮುಂಜಾನೆಯೇ ಸರಿ (3)
6. ತಾತನ ವನದಲ್ಲಿ ಪ್ರತಿ ದಿನವೂ ತೇರು–ಮೆರವಣಿಗೆ (4)
7. ಸರೋವರದಲ್ಲೇ ಜನಿಸಿದ್ದು ತಾವರೆಯೇ ಹೌದು (4)
9. ರಸ್ತೆಯೂ ಇಲ್ಲ ಸಾರಥಿಯೂ ಇಲ್ಲ– ಅದೊಂದು ಪಾತಾಳ ಲೋಕ (4)
12. ವಿರಸವನ್ನ ದೂರಮಾಡಲು ಒಂಬತ್ತೂ ಬಗೆಯ ಕಾವ್ಯರುಚಿ (4)
15. ಪರಿಕರದ ಹಣ ಕೊಡದೇ ಹೋದ ಕೇಸು (4)
17. ಸಾಲಾಗಿ ನಿಂತವರಲ್ಲೇ ಕಡ ಪಡೆದವ ಹಿಂದು ಮುಂದು (4)
18. ಕಳ್ಳ ಸನ್ಯಾಸಿಯ ಕೈಯಲ್ಲಿ ಪವಿತ್ರ ಕೊಡ (3)
19. ದೇಗುಲಕ್ಕೆ ಬಳಿದಿರುವ ಬಣ್ಣ ನೋಡಿ–ಶುಭ ಬಿಳುಪು (3)
20. ತೇರನ್ನೇರಿದವನನ್ನು ಅಲ್ಲೇ ಮಾಯಮಾಡುವುದೇ? (4)

**ಮೇಲಿಂದ ಕೆಳಕ್ಕೆ:**

1. ಅವನ ಅಜ್ಜನೂ ಕೂಡ ಭೂಮಿಯಲ್ಲಿ ಹುಟ್ಟಿದವನೇ ತಾನೇ? (4)
2. ವರಕವಿಯನ್ನು ಕಂಡಂಥ ಕನಸು (4)
3. ಕಷ್ಟ ಪರಿಹಾರ ಕೋರಿದ್ದಕ್ಕೆ ಬಾರಿಸುವುದೇ? (3)
5. ಅಸಂಖ್ಯಾತ ಅಕೃತ್ಯಗಳಿಂದ ಆತ ಕೆಟ್ಟದಾಗಿ ಪ್ರಸಿದ್ಧ (3)
7. ಸಾಧನೆ ಮಾಡಲು ತಕ್ಕದ್ದಾಗಿದೆ ಈ ಮನೆ (3)
8. ತಾರಸಿ ಮೇಲೆ ಕುಳಿತು ನುಡಿಸುತ್ತಿರುವ ತಂತೀ ವಾದ್ಯ ಗೊತ್ತೇ? (3)
10. ಸಮಾನಾರ್ಥಕಗಳನ್ನೆಲ್ಲ ಪಟ್ಟಿಮಾಡಿದ್ದು ಫಲಪ್ರದವಾಯಿತು (3)
11. ವರುಣನ ಸಾಮ್ರಾಜ್ಯದಲ್ಲಿ ಉಪ್ಪೋ ಉಪ್ಪು (3)
13. ಕರ್ತವ್ಯವನ್ನೆಲ್ಲ ತಿರಗಾ ಮುರುಗಾ ಮಾಡಿದವನಲ್ಲ ಆ ವ್ಯಾಪಾರಿ (3)
14. ಸರತಿ ಸಾಲಿನಲ್ಲಿ ನಿಂತರೆ ವಿದ್ಯಾಧಿದೇವತೆಯ ದರ್ಶನವಾದೀತು (4)
15. ಪ್ರಸಾದವನ್ನು ಸ್ವೀಕರಿಸಲು ಅಲಂಕಾರ ಸಾಮಗ್ರಿ ಬೇಕೇ? (4)
16. ಸುರಾಸುರರೆಲ್ಲರಿಗೂ ಪ್ರಿಯ ಬಿಡಿ ಈ ಮಾವಿನ ಫಲ (3)

## ಪದಬಂಧ: 29-4-2010ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಸಾವಧಾನ; 3. ಸಂದೇಹ; 4. ವಿಲೀನ; 6. ಸಹಸ್ರಾರು; 7. ವಯಸು; 9. ಜನಕ; 11. ನಮನ; 13. ಕವಳ; 15. ಕಾಸದಾರ; 17. ತ್ವರಿತ; 18. ಹಣತೆ; 19. ರಜೋಗುಣ.

**ಮೇಲಿಂದ ಕೆಳಕ್ಕೆ:** 1. ಸಾಹಸ; 2. ನವಿರು; 3. ಸಂಚಯ; 5. ನವೀನ; 7. ವಸನ; 8. ಸುಮ್ಮಾನ; 9. ಜಳಕ; 10. ಕರಾಳ; 12. ಮಹತ್ವ; 14. ವನಿತೆ; 15. ಕಾತರ; 16. ರಹಣ.

# ಒಂಟೆ ವೈಶಿಷ್ಟ್ಯ

## ಒಂಟೆ ಬೆನ್ನಲ್ಲಿ ಡುಬ್ಬ ಏಕೆ?

'ಮರುಭೂಮಿಯ ಹಡಗು' ಎಂದೇ ಒಂಟೆ ಪ್ರಸಿದ್ಧ. ಒಂಟೆಯ ಅತಿ ವಿಶಿಷ್ಟ ಲಕ್ಷಣ ಅದರ ಬೆನ್ನ ಮೇಲಿನ ಡುಬ್ಬ. ಒಂಟೆಗಳಲ್ಲಿ ಎರಡು ವಿಧ: "ಡ್ರೋಮ್ ಡೇರೀ ಒಂಟೆ ಮತ್ತು ಬ್ಯಾಕ್ಟ್ರಿಯನ್ ಒಂಟೆ." ಅರೇಬಿಯಾ ಉತ್ತರ ಆಫ್ರಿಕ ಮತ್ತು ಮಧ್ಯ ಏಷಿಯದ ಡ್ರೋಮ್ ಡೇರೀ ಒಂಟೆಗೆ ಒಂದು ಡುಬ್ಬ ಇದ್ದರೆ ಉತ್ತರ ಏಷಿಯದ ಬ್ಯಾಕ್ಟ್ರಿಯನ್ ಒಂಟೆಗೆ ಜೋಡಿ ಡುಬ್ಬ (ಚಿತ್ರ ನೋಡಿ).

ಒಂಟೆಯ ಒಂದು ವಿಶೇಷ ಸಾಮರ್ಥ್ಯ ಏನೆಂದರೆ ನೀರು ಸಿಕ್ಕಾಗ ಅದು ಒಂದೇ ಬಾರಿಗೆ ಸಿಕ್ಕಾಪಟ್ಟೆ ನೀರನ್ನು ಕುಡಿಯುತ್ತದೆ– ಒಮ್ಮೆಗೆ ಎರಡು ನೂರು ಲೀಟರ್‌ವರೆಗೆ! ನಂತರ ಹಲವಾರು ದಿನ ಅದಕ್ಕೆ ನೀರಿನ ಅಗತ್ಯವೇ ಇರುವುದಿಲ್ಲ. ಇದನ್ನು ಗಮನಿಸಿರುವ ಜನ ಒಂಟೆಯ ಬಗೆಗೆ, ಅದರ ಡುಬ್ಬದ ಬಗೆಗೆ ಒಂದು ಕಲ್ಪನೆ ಕಟ್ಟಿದ್ದಾರೆ: 'ಒಂಟೆಯ ಡುಬ್ಬ ನೀರಿನ ಸಂಗ್ರಹಾಗಾರ. ತಾನು ಕುಡಿವ ನೀರನ್ನು ಒಂಟೆ ಡುಬ್ಬದಲ್ಲಿ ತುಂಬಿಟ್ಟುಕೊಂಡು ಬೇಕಾದಾಗ ಬಳಸಿಕೊಳ್ಳುತ್ತದೆ'– ಹೀಗೆಂದು ಅಂತಹರು ಭಾವಿಸಿದ್ದಾರೆ.



ಇದೊಂದು ಭಾರೀ ತಪ್ಪು ಕಲ್ಪನೆ ಒಂಟೆಯ ಡುಬ್ಬಕ್ಕೂ ಅದು ಕುಡಿವ ನೀರಿಗೂ ಯಾವ ಸಂಬಂಧವೂ ಇಲ್ಲ. ಒಂಟೆ ಡುಬ್ಬದಲ್ಲಿ ನೀರಿನ ಒಂದು ಹನಿಯೂ ಇರುವುದಿಲ್ಲ.

ವಾಸ್ತವ ಏನೆಂದರೆ ಒಂಟೆಯ ಡುಬ್ಬ ಕೊಬ್ಬಿನ ಸಂಗ್ರಹಾಗಾರ. ಶುದ್ಧ ಸಸ್ಯಾಹಾರಿಯಾದ ಒಂಟೆಗೆ ಧಾರಾಳ ಆಹಾರ–ಮೇವು ಸಿಕ್ಕಾಗ ಅದು ಸೇವಿಸುವ ಹೆಚ್ಚುವರಿ ಆಹಾರವೆಲ್ಲ ಕೊಬ್ಬಾಗಿ ಪರಿವರ್ತನೆಗೊಂಡು ಡುಬ್ಬದಲ್ಲಿ ಶೇಖರವಾಗುತ್ತದೆ. ಹಾಗಾದಾಗ ಡುಬ್ಬ ದಷ್ಟ ಪುಷ್ಟವಾಗಿ ಉಬ್ಬಿ ನಿಲ್ಲುತ್ತದೆ. ಆಹಾರ ಸಿಗದಾಗ ಒಂಟೆಯ ಶರೀರ ಈ ದಾಸ್ತಾನನ್ನೇ ಬಳಸಿ ಶಕ್ತಿಯನ್ನು ಪಡೆಯುತ್ತದೆ. ಅಂಥ ಕಾಲದಲ್ಲಿ ಡುಬ್ಬ ಕುಗ್ಗುತ್ತದೆ.

ಸ್ತನಿ ವರ್ಗದ ಎಲ್ಲ ಪ್ರಾಣಿಗಳಲ್ಲೂ ಶರೀರದ ಎಲ್ಲೆಡೆ ಚರ್ಮದ ಕೆಳಗೆ ಕೊಬ್ಬಿನ ಒಂದು ಪದರ ಸಂಗ್ರಹವಾಗಿರುತ್ತದೆ. ಆಹಾರ ದೊರಕದಾಗ ಈ ಕೊಬ್ಬೇ ಶಕ್ತಿಯನ್ನು ಒದಗಿಸುತ್ತದೆ. ಅಷ್ಟೇ ಅಲ್ಲದೆ ಶಾಖದ ಅವಾಹಕವಾದ ಕೊಬ್ಬಿನ ಪದರ ಚಳಿಯ, ಅತಿ ಶೀತದ ಪರಿಸ್ಥಿತಿಗಳಲ್ಲಿ ದೇಹದ ಉಷ್ಣತೆ ಕಳೆದು ಹೋಗದಂತೆ ರಕ್ಷಿಸುತ್ತದೆ ಕೂಡ. ಆದರೆ ಮರುಭೂಮಿವಾಸಿಯಾದ ಒಂಟೆ ಅಲ್ಲಿನ ಹಗಲಿನ ವಿಪರೀತ ಬಿಸಿಲಲ್ಲಿ ತೀವ್ರ ಏರುವ ದೇಹೋಷ್ಣವನ್ನು ಸುಲಭವಾಗಿ ಆಗಾಗ ಬೆವರಿನ ಮೂಲಕ ಹೊರಹಾಕಬೇಕು. ಅದಕ್ಕೆ ಅಡ್ಡಿಯಾಗದಿರಲೆಂದು ಕೊಬ್ಬಿನ ಪ್ರಧಾನ ಸಂಗ್ರಹ ಡುಬ್ಬದಲ್ಲಿ.

■ ಎನ್. ವಾಸುದೇವ್